**OS. No.395/2015** **PW –1**

**ಪ್ರಮಾಣೀಕರಿಸಲಾದ ದಿನಾಂಕ : 25.06.2025.**

**<u>ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ. S.S ವಕೀಲರಿಂದ</u> :-**

1ನೇ ಪ್ರತಿವಾದಿಯ ಮನೆಯ ಮುಖ್ಯ ಬಾಗಿಲು ಉತ್ತರ ದಿಕ್ಕಿನಲ್ಲಿ ಇದೆ. ನಾನು ಈ ದಾವಾ ಆಸ್ತಿಯಲ್ಲಿ ಅರ್ಧ ಮನೆ ಹಾಗೂ ಅರ್ಧ ಖಾಲಿ ಜಾಗ ಇದೆ. ದಾವಾ ಆಸ್ತಿಯ ಪಶ್ಚಿಮಕ್ಕೆ ಮನೆ ಹಾಗೂ ಪೂರ್ವಕ್ಕೆ ಖಾಲಿ ನಿವೇಶನ ಇದೆ. ಖಾಲಿ ನಿವೇಶನವು 13 X 30 ಅಡಿ ಇದೆ. ನಾನು ಈ ದಾವೆಯನ್ನು ಸದರಿ 13 X 30 ಅಡಿ ನಿವೇಶನದ ಸಂಬಂಧ ದಾವೆಯನ್ನು ಹಾಕಿರುತ್ತೇನೆ. ನನ್ನ ಮನೆಯ ಬಾಗಿಲು ಉತ್ತರಕ್ಕೆ ಇದೆ. ಸದರಿ ಮನೆ ಈಗ ಬಿದ್ದು ಹೋಗಿ ಈಗ ಅಲ್ಲಿ ಖಾಲಿ ಜಾಗ ಇದೆ ಎಂದರೆ ಸರಿ. ಮನೆ ಬಿದ್ದು ಹೋಗಿ ಒಂದು ವರ್ಷ ಆಗಿದೆ. ದಾವಾ ಆಸ್ತಿಯ ಉತ್ತರಕ್ಕೆ ಮುಖ್ಯ ರಸ್ತೆ ಇದೆ. ಸದರಿ ಮುಖ್ಯ ರಸ್ತೆಯು ಪೂರ್ವದಿಂದ ಪಶ್ಚಿಮಕ್ಕೆ ಹೋಗುತ್ತದೆ. 1ನೇ ಪ್ರತಿವಾದಿಯ ಮಗಳು ಗೊತ್ತು. ನ್ಯಾಯಾಲಯದ ಮುಂದಿರುವ ಮಹಿಳೆ ನನಗೆ ಗೊತ್ತು. ಆಕೆಯ ಹೆಸರು ನನಗೆ ಗೊತ್ತಿಲ್ಲ. ಆಕೆಯು 1ನೇ ಪ್ರತಿವಾದಿಯ ಮಗಳು ಎಂದರೆ ಸರಿ. ಆಕೆಯ ಗಂಡನ ಹೆಸರು ಶಿವಣ್ಣ ಎಂದರೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಮನೆಯಲ್ಲಿ ಎಷ್ಟು ಜನ ವಾಸವಿದ್ದಾರೆ ಎಂದು ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿಯ ಮನೆಯ ಅರ್ಧ ಭಾಗವಾಗಿದ್ದು ಒಂದು ಭಾಗದಲ್ಲಿ 1ನೇ ಪ್ರತಿವಾದಿ ಮತ್ತು ಮತ್ತೊಂದು ಭಾಗದಲ್ಲಿ 2ನೇ ಪ್ರತಿವಾದಿ ವಾಸವಾಗಿರುತ್ತಾರೆ. 2ನೇ ಪ್ರತಿವಾದಿಯು ಸದರಿ ಮನೆಯ ದಕ್ಷಿಣದ ಭಾಗದಲ್ಲಿ ವಾಸವಾಗಿದ್ದಾರೆ ಎಂದರೆ ಸಾಕ್ಷಿಯು ಪೂರ್ವದಲ್ಲಿ ಇರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮನೆಯಲ್ಲಿ 1ನೇ ಪ್ರತಿವಾದಿ ಹಾಗೂ ಆಕೆಯ 5 ಜನ ಮಕ್ಕಳು ಸುಮಾರು 35 ವರ್ಷಗಳಿಂದ ವಾಸವಿದ್ದಾರೆ ಎಂದರೆ ಗೊತ್ತಿಲ್ಲ. ಸದರಿ ಮನೆಗೆ ಹೋಗಲು ಉತ್ತರದಿಂದ ದಕ್ಷಿಣಕ್ಕೆ ಬಂದು ಹೋಗಬೇಕಾಗುತ್ತದೆ ಎಂದರೆ ಮನೆಯ ಮುಂದೆ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಜಾಗಕ್ಕೂ ಹಾಗು 1ನೇ ಪ್ರತಿವಾದಿಯ ಮನೆಯ ಮಧ್ಯದಲ್ಲಿ 8 ಅಡಿ ಖಾಲಿ ಜಾಗ ಎಂದರೆ ಸಾಕ್ಷಿಯು 1ನೇ ಪ್ರತಿವಾದಿಯು ನನ್ನ 13 ಅಡಿ ಜಾಗವನ್ನು ಒತ್ತುವರಿ ಮಾಡಿರುತ್ತಾರೆ. ಸಾಕ್ಷಿಯು ಮುಂದುವರೆದು ನಾನು 13 ಅಡಿ ಜಾಗವನ್ನು ಬಿಟ್ಟಿದ್ದು ಅವರು 6 ಅಡಿ ಜಾಗವನ್ನು ಒತ್ತುವರಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಸದರಿ ಜಾಗವನ್ನು ಸುಮಾರು 10 ವರ್ಷಗಳಿಂದ ಒತ್ತುವರಿ ಮಾಡಿರುತ್ತಾರೆ. ನಾನು ಈ ದಾವೆಯನ್ನು ಅವರು ಒತ್ತುವರಿ ಮಾಡಿರುವ ಜಾಗವನ್ನು ಬಿಟ್ಟು ಕೊಡುವಂತೆ ಕೇಳಿ ದಾಖಲಿಸಿರುತ್ತೇನೆ. ನಾನು ಈ ದಾವೆಯನ್ನು ಪ್ರತಿವಾದಿಯರು ನನ್ನ ಒಟ್ಟು 13 X 30 ಅಡಿ ಜಾಗವನ್ನು ಬಿಟ್ಟು ಕೊಡುವಂತೆ ದಾಖಲಿಸಿರುತ್ತೇನೆ. ಸಾಕ್ಷಿಯು ಮುಂದುವರೆದು ಅವರ

ಸಾಮಾನುಗಳನ್ನು ಸದರಿ ಜಾಗದಲ್ಲಿ ಹಾಕಿ ನನಗೆ ಮನೆಯನ್ನು ಕಟ್ಟಲು ತೊಂದರೆ ನೀಡುತ್ತಿದ್ದಾರೆ ಎಂದು ನುಡಿಯುತ್ತಾರೆ. ನಾನು ಈ ದಾವೆಯಲ್ಲಿ ನಾನು ಮನೆಯನ್ನು ಕಟ್ಟಬೇಕು, ಸದರಿ ಜಾಗದಲ್ಲಿ ಪ್ರತಿವಾದಿಯರು ಸಾಮಾನುಗಳನ್ನು ಹಾಕಿ ನನಗೆ ಮನೆಯನ್ನು ಕಟ್ಟಲು ಅಡ್ಡಿ ಆತಂಕಪಡಿಸಿರುತ್ತಾರೆ ಎಂದು ನಮೂದಿಸಿರುವುದಿಲ್ಲ. ನನ್ನ ಜಾಗ ಮತ್ತು ಪ್ರತಿವಾದಿ ಮನೆಯ ನಡುವೆ ಇರುವಂತಹ 13 X 30 ಅಡಿ ಜಾಗವು ನನಗೆ ಸೇರಿದ್ದಲ್ಲ ಹಾಗೂ ಸದರಿ ಜಾಗವು 1ನೇ ಪ್ರತಿವಾದಿಯು ಓಡಾಡಲು ಬಿಟ್ಟಿರುವಂತಹ ಜಾಗವಾಗಿರುತ್ತದೆ ಎಂದರೆ ಸಾಕ್ಷಿಯು ಅದು ನನ್ನ ಜಾಗವಾಗಿರುತ್ತದೆ. ಅವರಿಗೆ ಓಡಾಡಲು ಮುಂದೆ ರಸ್ತೆ ಇರುತ್ತದೆ ಎಂದು ನುಡಿಯುತ್ತಾರೆ. ನಾನು ಹೇಳುವಂತಹ ಜಾಗದಲ್ಲಿ ಮನೆ ಬಿದ್ದು ಹೋಗಿ ಅದು ಖಾಲಿ ಜಾಗ ಹಾಗೇ ಇದೆ ಎಂದರೆ ಸದರಿ 13 X 30 ಅಡಿ ಜಾಗವು ನನ್ನದೇ ಇದೆ ಎಂದು ನುಡಿಯುತ್ತಾರೆ. ಪ್ರತಿವಾದಿಯರು ಇಂದಿಗೂ ನಮ್ಮ ಜಮೀನಿಗೆ ಅಕ್ರಮ ಪ್ರವೇಶ ಮಾಡಿ ನಮಗೆ ತೊಂದರೆ ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಹಾಕಿದ್ದೇನೆ ಎಂದರೆ ಸರಿಯಲ್ಲ. ಸದರಿ ಓಡಾಡಲು ಬಿಟ್ಟಿರುವ ಖಾಲಿ ಜಾಗವನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**Sd/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**